**ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚನ್ನಪಟ್ಟಣ**

**ಉಪಸ್ಥಿತರುಃ ಶ್ರೀಮತಿ ಉಷಾರಾಣಿ ಬಿ.ಎನ್, ಬಿ.ಎ. ಎಲ್.ಎಲ್.ಬಿ. ಎಲ್.ಎಲ್.ಎಂ.,**
**ಅ. ದ. ನ್ಯಾ. ದಂ.ಗಳು, ಚನ್ನಪಟ್ಟಣಃ**

**ಸಿಸಿ :1047/2017**

**ಪಿರ್ಯಾದಿ ಃ ಚನ್ನಪಟ್ಟಣ ಪುರ ಪೊಲೀಸ್ ಠಾಣೆ**

**- ವಿರುದ್ಧ -**

**ಆರೋಪಿತರು ಃ** ಎ1. ಮಂಜು
ಬಿನ್ ಶಿವಲಿಂಗಯ್ಯ, 27 ವರ್ಷ,

ವಾಸ ಸೊಳ್ಳೆಪುರ, ಮದ್ದೂರು ಹೋಬಳಿ
ಮಂಡ್ಯ ತಾಲ್ಲೂಕು.

ಎ2. ಸುನೀಲ್ ವಿ ಬಿನ್ ವೆಂಕಟೇಶ, 23 ವರ್ಷ,
ದೊಡ್ಡಮಳೂರು ಗ್ರಾಮ, ಚನ್ನಪಟ್ಟಣ ತಾಲ್ಲೂಕು.

ಎ3.
ಶ್ರೀನಿವಾಸ ಬಿನ್ ಲೋಕೇಶ, 28 ವರ್ಷ,
4 ನೇ ಕ್ರಾಸ್ ಮರಳಹೊಲ,
ಚನ್ನಪಟ್ಟಣ ಟೌನ್.

ಎ4. ಕಿರಣ, 26 ವರ್ಷ,
ದೊಡ್ಡಮಳೂರು, ಚನ್ನಪಟ್ಟಣ.

ಎ5.
ಪ್ರಮೋದ ಬಿನ್ ವೆಂಕಟೇಶ, 28 ವರ್ಷ,
ದೊಡ್ಡಮಳೂರು, ಚನ್ನಪಟ್ಟಣ.

ಎ6. ಅರುಣ ಬಿನ್ ನಾಗರಾಜು, 27 ವರ್ಷ,

ದೊಡ್ಡಮಳೂರು, ಚನ್ನಪಟ್ಟಣ.

## ದೋಷಾರೋಪಣೆ

1) **ಮೊದಲನೇಯದಾಗಿ ಆರೋಪಿಗಳಾದ ನೀವು ದಿಃ 06.10.2016 ರಂದು** ರಾತ್ರಿ **8.30 ಗಂಟೆ ಸಮಯದಲ್ಲಿ ಚನ್ನಪಟ್ಟಣ** ಟೌನ್ ಅಂಚೆ ಕಛೇರಿ ರಸ್ತೆಯಲ್ಲಿ ಆರೋಪಿಗಳಾದ ನೀವು ಚಾಸಾ 7 ರವರ ಬಾಬ್ತು ಕೆಎ 42/ಎ 4814 ಪಿಗೋ ಆಟೋಲ್ಲಿ ಬಂದು ಚಾಸಾ 1 ರವರು ಚಲಾಯಿಸುತ್ತಿದ್ದ ಕೆಎ 04/ ಎಂಕೆ 2952 ಎಕ್ಸ್ ಯು ವಿ 500 ಕಾರನ್ನು ಅಡ್ಡಗಟ್ಟಿ ಕಾರಿನಲ್ಲಿದ್ದ ಅವರ ಜೊತೆ ಜಗಳ ತೆಗೆದು 1 ನೇ ಆರೋಪಿಯು ಕಾರಿನಲ್ಲಿ ಕುಳಿತಿದ್ದ ಚಾಸಾ 2 ರವರಿಗೆ ಚಾಕುವಿನಿಂದ ಕತ್ತು ಮತ್ತು ಮುಖದ ಮೇಲೆ ಹೊಡೆದು **ಸಾಮಾನ್ಯ ಸ್ವರೂಪದ ರಕ್ತಗಾಯವನ್ನುಂಟು ಮಾಡಿರುತ್ತೀರಿ, ಆದಕಾರಣ ನೀವು ಭಾ.ದಂ.ಸಂ. ಕಲಂ.324 ಸಹಕಲಂ 149 ರಡಿಯಲ್ಲಿ ಶಿಕ್ಷಾಹ9 ಅಪರಾಧವನ್ನು ಮಾಡಿರುತ್ತೀರಿ.**

2) **ಆರೋಪಿಗಳಾದ ನೀವೆಲ್ಲಾರು ಸಮಾನ ಉದ್ದೇಶದಿಂದ, ಅದೇ ದಿನ, ಅದೇ ಸ್ಥಳ ಹಾಗೂ ಅದೇ ಸಮಯದಲ್ಲಿ,** 3 ನೇ ಆರೋಪಿಯು ತನ್ನ ಕೈ ಮುಷ್ಟಿಯಿಂದ ಚಾಸಾ 3 ರವರ ಮುಖ ಮತ್ತು ಮೂಗಿನ ಮೇಲೆ ಗುದ್ದಿ ಗಾಯಪಡಿಸಿದ್ದು, ಉಳಿದ ಎಲ್ಲಾ ಆರೋಪಿಗಳು ಕೆಳಕ್ಕೆ ಕೆಡವಿಕೊಂಡು ಕಾಲಿನಿಂದ ಒದ್ದು **ನೋವುಂಟು ಮಾಡಿರುತ್ತೀರಿ, ಆದಕಾರಣ ನೀವು ಭಾ.ದಂ.ಸಂ. ಕಲಂ.323 ಸಹಕಲಂ 149 ರಡಿಯಲ್ಲಿ ಶಿಕ್ಷಾಹ9 ಅಪರಾಧವನ್ನು ಮಾಡಿರುತ್ತೀರಿ.**

3) **ಆರೋಪಿಗಳಾದ ನೀವೆಲ್ಲಾರು ಸಮಾನ ಉದ್ದೇಶದಿಂದ, ಅದೇ ದಿನ, ಅದೇ ಸ್ಥಳ ಹಾಗೂ ಅದೇ ಸಮಯದಲ್ಲಿ,** ಚಾಸಾ 1 ಮತ್ತು 3 ರವರ ಕತ್ತಿನಲ್ಲಿದ್ದ ತಲಾ 50 ಗ್ರಾಂ ತೂಕದ ಚಿನ್ನದ ಚೈನು ಬಿದ್ದು ಹೋಗಿದ್ದು, **ಆದಕಾರಣ ನೀವು ಭಾ.ದಂ.ಸಂ. ಕಲಂ.327 ರಡಿಯಲ್ಲಿ ಸಹಕಲಂ 149 ಶಿಕ್ಷಾಹ9 ಅಪರಾಧವನ್ನು ಮ್ಾಡಿರುತ್ತೀರಿ.**

4) **ಅದೇ ದಿನ, ಅದೇ ಸ್ಥಳ, ಅದೇ ಸಮಯದಲ್ಲಿ, ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ,** 2 **ನೇ ಆರೋಪಿ ಕಾರಿನ ಮುಂಭಾಗದ ಗ್ಲಾಸನ್ನು ಕೈಯಿಂದ ಗುದ್ದಿ ಜಖಂಗೊಳಿಸಿ, ಸುಮಾರು 5000 ನಷ್ಟವುಂಟು**

**ಮಾಡಿರುತ್ತೀರಿ ಆದಕಾರಣ ನೀವು ಭಾ.ದಂ.ಸಂ. ಕಲಂ.427 ಸಹಕಲಂ.34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುತ್ತದೆ.**

5) **ಆರೋಪಿಗಳಾದ ನೀವೇಲ್ಲಾರು ಸೇರಿ ಅದೇ ದಿನ, ಅದೇ ಸ್ಥಳ ಹಾಗೂ ಅದೇ ಸಮಯದಲ್ಲಿ, ಚಾಸಾ.1** ರಿಂದ **3 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ ಆದಕಾರಣ ನೀವು ಭಾ.ದಂ.ಸಂ. ಕಲಂ.504 ರಡಿಯಲ್ಲಿ ಸಹಕಲಂ 149 ಶಿಕ್ಷಾಹ9 ಅಪರಾಧವನ್ನು ಪ್ಮಾಡಿರುತ್ತೀರಿ. ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.**

6) **ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ, ಚಾಸಾ 1 ರಿಂದ 3 ರವರಿಗೆ ಪ್ರಾಣ ಬೆದರಿಕೆ ಹಾಕಿರುತ್ತೀರಿ. ಆದಕಾರಣ ನೀವು ಭಾ.ದಂ.ಸಂ. ಕಲಂ.506 ಸಹವಾಚಕ ಕಲಂ.149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.**

**(ಈ ಮೇಲಿನ ಆರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾಯಿತು)**

ದಿನಾಂಕಃ 15.10.2022.

ಅಪರ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ,. ಚನ್ನಪಟ್ಟಣ.

**ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚನ್ನಪಟ್ಟಣ**

**ಸಿಸಿ :1047/2017**

**ಪಿರ್ಯಾದಿದಾರರುಃ** **ಆರೋಪಿತರುಃ**

**ಚನ್ನಪಟ್ಟಣ ಪುರ ಪೊಲೀಸ್** ಮಂಜು ಮತ್ತು ಇತರರು

**ದೋಷಾರೋಪಣೆ**

1. **ಸದರಿ ದೋಷಾರೋಪಣೆ ಓದಿ ಹೇಳಿದ್ದು ಅರ್ಥವಾಯಿತೆ?**

**ಉತ್ತರಃ** ಎ **1**

ಎ **2**

ಎ **3**

ಎ **4**

ಎ **5**

ಎ **6**

2. **ನಿಮ್ಮ ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೋ?**

**ಉತ್ತರಃ** ಎ **1**

ಎ **2**

ಎ **3**

ಎ **4**

ಎ **5**

ಎ **6**

ಮೇಲ್ಕಂಡ ದೋಷರೋಪಣೆಯನ್ನು ಆರೋಪಿತನಿಗೆ ಓದಿ ಹೇಳಿ ಅದನ್ನು ಅರ್ಥೈಸಿಕೊಂಡು ನನಗೆ ನೀಡಿದ ಉತ್ತರವನ್ನು ನಮೂದಿಸಿಕೊಳ್ಳಲಾಯಿತು. ಮತ್ತು ಈ ಒಂದು ದೋಷವಾದ ಪತ್ರವು ಸತ್ಯವಾಗಿ ಮತ್ತು ಸಂಪೂರ್ಣವಾಗಿ ಆರೋಪಿತನು ನೀಡಿದ ಹೇಳಿಕೆಯನ್ನು ಒಳಗೊಂಡಿದೆಯೆಂದು ಧೃಢೀಕರಿಸುತ್ತೇನೆ.

**ದಿನಾಂಕಃ 15.10.2022**

**ಅಪರ ಸಿವಿಲ್ ಜಡ್ಜ್ ಮತ್ತು**
**ಜೆ.ಎಂ.ಎಫ್.ಸಿ., ಚನ್ನಪಟ್ಟಣ.**